

ಅದೊಂದು ದಿನ ಊರಿನ ಜನರ ಬಾಯಿಂದ ನನಗೊಂದು ವಿಷಯ ತಿಳಿಯಿತು. ಆದರೂ ನಾನು ನಂಬಲಿಲ್ಲ. ನನ್ನ ಹೆಂಡತಿ ನಂಬಿಕಸ್ಥಳು ಅಂದುಕೊಂಡೆ, ಅವಳ ಹತ್ತಿರ ಈ ವಿಷಯ ಕೇಳದೇ. ಮೂರು ತಿಂಗಳು ಸಂಸಾರ ಮಾಡಿದೆ. ಜನರು ಅಂದುಕೊಳ್ಳುತ್ತಿದ್ದ ಮಾತುಗಳು ನನ್ನ ಬಾಧಿಸತೊಡಗಿದವು. ಆದರೂ ಅವಳನ್ನು ನಾನು ಹೇಗೆ ನೇರವಾಗಿ ಕೇಳಲಿ? ನನ್ನ ಮಕ್ಕಳ ಮುಗ್ಧ ಕಣ್ಣುಗಳು ನನ್ನ ಮುಂದೆ ಕಾಣುತ್ತಿದ್ದವು. ಶಾಂತ ಚಿತ್ತವಾಗಿ ಹರಿಯುವ ಸಮುದ್ರವೂ ಒಂದೊಂದು ಸಾರಿ ಅಲೆಗಳನ್ನು ದಡಕ್ಕೆ ಅಪ್ಪಳಿಸುತ್ತದೆ. ಆ ನಿಟ್ಟಿನಲ್ಲಿ ದೃಢವಾಗಿ ಆ ವಿಷಯ ಕುರಿತು ಯೋಚಿಸಿದೆ.

ಒಂದು ದಿನ, ‘ಕೆಂಪಿ, ನಾನು ಇವತ್ತು ಮನೆಗೆ ಬರುವುದಿಲ್ಲ. ಸ್ನೇಹಿತರೊಬ್ಬರು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಸೀರಿಯಸ್ ಆಗಿದ್ದಾರೆ. ಮನೆಕಡೆ ಹುಷಾರು’ ಎಂದು ಹೇಳಿ ಬೇಕಂತಲೇ ಹೊರಗೆ ಹೊರಟೆ.

ಸಂಜೆಯ ಸೂರ್ಯ ಪಶ್ಚಿಮ ದಿಕ್ಕಿನ ಗುಡ್ಡದ ಮರೆಯಲ್ಲಿ ಇಳಿಯುತ್ತಿದ್ದ. ನಾನು ನನ್ನ ಹೊಲದ ಹತ್ತಿರದ ಪೊದೆಯ ಮರೆಯ ಹಾಸುಬಂಡೆಯ ಮೇಲೆ ಕೂತೆ. ಸುಮಾರು ಹೊತ್ತು. ಆಗಲೇ ಆಕಾಶವನ್ನು ಸೀಳಿ ಬೆಳದಿಂಗಳು ನೆಲಕ್ಕೆ ಸುರಿಯಲು ಪ್ರಾರಂಭಿಸಿತು. ಎದೆಯ ಭಾರ ಕೊಂಚ ಕಡಿಮೆ ಅನ್ನಿಸುವಂತೆ ಕಣ್ಣುಗಳಿಗೆ ತಂಪು ಕೊಡುತ್ತಿತ್ತು. ಕೈ ನೋಡಿಕೊಂಡೆ, ಗಡಿಯಾರವಿಲ್ಲ. ಛೇ! ಸಮಯ ನನ್ನದಲ್ಲ ಅನ್ನಿಸಿತು. ಆಕಾಶದಲ್ಲಿ ಬೆಳಗುವ ಚುಕ್ಕಿಗಳ ಎಣಿಸತೊಡಗಿದೆ. ಒಂದು ಕಡೆಯಿಂದದ ಲೆಕ್ಕ ಹಾಕುತ್ತಾ ಹೋದರೆ, ಹಿಂದಿನಿಂದ ಕೆಲವು ಚುಕ್ಕಿಗಳು ನೆಲದ ಕಡೆ ಬೀಳುವುದು ಕಾಣಿಸುತ್ತಿತ್ತು. ಲೆಕ್ಕ ತಪ್ಪಿತಲ್ಲ ಎಂದು ಮತ್ತೆ ಎಣಿಸತೊಡಗಿದೆ. ಮತ್ತೆ ಬೀಳುತ್ತಲೇ ಇದ್ದವು. ಚುಕ್ಕಿಗಳ ಲೆಕ್ಕ ಸಿಗಲೇ ಇಲ್ಲ. ಆಗಲೇ ಚಂದ್ರ ನೆತ್ತಿ ಮೇಲಿದ್ದ, ಎದ್ದು ಹೊರಟೆ ಮನೆಯ ಕಡೆ.

ಬೆಳದಿಂಗಳ ಬೆಳಕಿಗೆ ನಾನು ನನ್ನ ನೆರಳನ್ನೇ ತುಳಿಯುತ್ತಿದ್ದೆ. ಅಲ್ಲೊಂದು ಇಲ್ಲೊಂದು ನಾಯಿ ಬೊಗಳುತ್ತಿದ್ದವು. ಯಾವುದನ್ನೂ ಲೆಕ್ಕಿಸದೆ ಮನೆಯ ಕದ ತಟ್ಟಿ, ಹೆಂಡತಿ ಹೆಸರನ್ನು ಕರೆದೆ. ಎಷ್ಟು ಹೊತ್ತು ಕರೆದರೂ ಅವಳು ತುಟಿಪಿಟಿಕ್ ಅನ್ನಲಿಲ್ಲ. ಮತ್ತೆ ಕೂಗಿದೆ. ‘ರೀ ಬಂದೆ’ ಅಂದ ಮಾತು ಕೇಳುತ್ತಿದ್ದಂತೆ ಕದ ತಟ್ಟುವುದ ನಿಲ್ಲಿಸಿದೆ.

ಬಂದವಳೇ ‘ಅದೇನು ಇಷ್ಟೊತ್ನಲ್ಲಿ. ಅಷ್ಟು ತಡವಾಗಿ ಹೋದವರು’ ಅಂದಳು. ನಾನು ಮಾತಾಡಲಿಲ್ಲ. ಅವಳ ಹಣೆಯ ಮೇಲಿನ ಕುಂಕುಮ ತೀಡಿತ್ತು. ಕೂದಲು ಕೆದರಿದ್ದನ್ನು, ಹಣೆಯ ಮೇಲಿನ ಬೆವರನ್ನು ಗಮನಿಸಿ, ‘ಅವನು ತೀರಿಹೋದ!’ ಎನ್ನುತ್ತಾ ಒಳ ಹೋದೆ. ದೀಪ ಉರಿಯುತ್ತಿತ್ತು. ಹಾಸಿಗೆ ಸುಕ್ಕಲಾಗಿತ್ತು. ಕೋಣೆಯಲ್ಲಿ ಮಾಮೂಲಿ ಗಾಳಿ ಇರಲಿಲ್ಲ. ಕಾಮದ ವಾಸನೆ ಬೆರೆತ ಗಾಳಿ ಮೂಗಿನ ವಳ್ಳೆಗಳಿಗೆ ತಾಕಿ ಅಸಹ್ಯವೆನಿಸುತ್ತಿತ್ತು. ಒಡೆದ ಬಳೆಯ ಚೂರುಗಳು ಕಾಲ ತಾಕಿದವು. ಮುಖ ನೋಡಿದೆ. ತಕ್ಷಣಕ್ಕೆ ಉಕ್ಕುತ್ತಿರುವ ಭಯದ ಬೆವರು ಸುಖದ ಬೆವರ ಹೆಜ್ಜೆಯನ್ನು ಅಳಿಸಲು ಪ್ರಯತ್ನದಂತಿತ್ತು. ಕಿವಿಗೊಟ್ಟು ಆಲಿಸಿದೆ. ಯಾರದೋ ಉಸಿರು ಕೋಣೆ ತುಂಬಿತ್ತು. ಅವಳ ಕಣ್ಣೀರು ನನ್ನ ಪಾದದ ಮೇಲೆ ಬಿದ್ದವು. ಸಂಸಾರದ ಗುಟ್ಟು ರಟ್ಟಾಗುವುದು ಬೇಡವೆಂದು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕಿಕೊಂಡೆ. ಅವತ್ತು ಅವಳನ್ನು ಕೊಲೆ ಮಾಡಬಹುದಿತ್ತು. ಹಾಗೆ ಮಾಡಿದ್ದರೆ ನಾನು ಇವತ್ತು ಜೈಲಿನಲ್ಲಿರುತ್ತಿದ್ದೆ. ಮಕ್ಕಳ ಮುಖ ಎದುರು ನಿಂತಿತ್ತು. ವಲ್ಲದ ಮನಸು ಕಾಡಿನತ್ತ ನಡೆಯುವಂತೆ ಮಾಡಿತು.

‘ನನಗೆ ನ್ಯಾಯಬೇಕು. ನನಗೊಬ್ಬನಿಗಲ್ಲ, ನನ್ನ ಜನಾಂಗಕ್ಕೆ ನ್ಯಾಯ ದೊರಕಿಸಿಕೊಡಬೇಕು. ಅವರೂ ಮನುಷ್ಯರೆಂದು ಅಂಥ ಸಮಾಜಕ್ಕೆ ತೋರಿಸಬೇಕು. ನನಗೆ ಆ ದಾರಿ ಬೇಕು. ಅದನ್ನು ನಾನು ಹುಡುಕುತ್ತಲೇ ಬರುತ್ತಿದ್ದೇನೆ. ನನ್ನ ಮನಸ್ಸಿನ ಆಸೆಗಳೆಲ್ಲಾ ಸತ್ತು ಹೋಗಿವೆ’ ಎಂದ ಮನುಷ್ಯ.

ಇಷ್ಟು ಹೊತ್ತಿನ ಮೌನ ಮುರಿದ ಆಕೃತಿ ನುಡಿಯಿತು: ‘ಯಾವುದೂ ನಮ್ಮದಲ್ಲ. ತೊಗಲಷ್ಟೇ ನಮ್ಮದು. ಒಂಟಿತನ ಎಂಬುದು ಚಿಂತನೆಗೆ ದಾರಿಯನ್ನು ವಿಸ್ತರಿಸುತ್ತದೆ. ನೀನು ಗುರಿ ತಲುಪುವ ಜಾಗಕ್ಕೇ ಬಂದಿರುವೆ. ಸಮಸ್ಯೆ ಹುಟ್ಟಿದ ಕಡೆಯೇ ಉತ್ತರವೂ ಇರುತ್ತದೆ. ಹುಡುಕಿಕೊಳ್ಳಬೇಕಷ್ಟೆ. ದುರಹಂಕಾರಕ್ಕೆ, ಮೋಸಕ್ಕೆ ನಿರ್ಲಕ್ಷ್ಯವೇ ಮದ್ದಾಗಬಾರದು. ನಾವು ನಮ್ಮೊಳಗೆ ಬೆಳಕ ಬಿತ್ತಬೇಕು. ನಾವು ಬಿತ್ತುವ ಬೆಳಕು ಕತ್ತಲನ್ನು ನುಂಗಬೇಕು. ಚಲಿಸುವ ಹಾದಿ ಸುಗಮವಾಗಿ ಸಾಗಿ ಆ ನಮ್ಮ ಮಂಗಳದ ಬೆಳಕನ್ನು ಮುಟ್ಟಬೇಕು. ಜಗ ಬೆಳಗಬೇಕು. ಮೈಗಂಟಿದ ಚರ್ಮದಂತೆ ಜಾತಿಜಾಡ್ಯ. ಮನಸು ಮನಸುಗಳ ನಡುವೆ ಬದಲಾವಣೆಯ ಬುಡ್ಡಿ ಹೊತ್ತಿಸದ ಹೊರತು ಕಾನೂನು ಕಟ್ಟಳೆ ಏನೂ ಮಾಡಲಾಗದು. ಬಣ್ಣದಲ್ಲಿ ಹರಿಯುವ ರಕ್ತದಲ್ಲಿ ಜಾತಿ ಹುಡುಕುವ ಮಂದಿಗೆ ಅರಿವಿನ ಬೆಳಕಿನ ಅಗತ್ಯವಿದೆ. ಕಾಣದ ಜಾತಿ ಕೈಗೆ ಸಿಗದ ಮನಸು ಹರಿಯುವ ನದಿಯ ಹಾಗೆ. ಅದರೊಳಗೆ ಮುಖ ತೊಳೆದುಕೊಂಡಾಗಲೇ ಬದುಕಿನ ಬಣ್ಣ ಬಯಲಾಗುವುದು. ಇನ್ನೊಂದು ಮಾತು. ಎದುರಿಗೆ ಬಂದವರನ್ನು ಹೊಡೆಯಬಹುದು. ಅಪ್ಪುವುದು ಕಷ್ಟ. ಬಗಲಲ್ಲೇ ಇದ್ದು ಒಡೆದ ಮನಸುಗಳ ನಡುವೆ ಬದುಕು ಅಸಾಧ್ಯ. ಹೊರಡು, ಜಗತ್ತಿಗಂಟಿದ ಕತ್ತಲು ತೊಳೆಯುವ ಕೆಲಸ ನಿನ್ನಿಂದ ಮುಂದುವರಿಯಲಿ. ನಾನು ನಮ್ಮ ದಾರಿಯ ಘನತೆಯನ್ನು ಹೇಳುತ್ತಲೇ ಇರುವೆ. ನಿಮಗೆ ನನ್ನ ದನಿಯ ಕೇಳುವ ವ್ಯವಧಾನವಿಲ್ಲ, ಬಯಕೆಯಿಲ್ಲ. ನಿಮ್ಮ ಆತ್ಮಗಳ ದೀಪಗಳನ್ನು ನೀವೇ ನಂದಿಸಿಬಿಟ್ಟಿದ್ದೀರಿ. ಈಗ ನಾನೂ ಹೊರಡುವೆ. ನೀನು, ನಾನು ನಡೆದ ದಾರಿಯ ಮೇಲೆಯೇ ಬಾ, ನಿನಗೆ ಹೊಸದೊಂದು ದಾರಿ ತೆರೆದುಕೊಳ್ಳುತ್ತದೆ.’

ಮರುಮಾತನಾಡದೆ ಆಕೃತಿ ಬೆನ್ನುಮಾಡಿ ನಡೆಯುತ್ತಾ ಹೋಯಿತು.

ಆಗಲೇ ಸಂಜೆ ಸೂರ್ಯ ತನ್ನ ಕೆಲಸ ಮುಗಿಸಿ ಅಸ್ತಂಗತನಾಗಿದ್ದ. ಮಬ್ಬು ಮಬ್ಬು ಕತ್ತಲು ಕಾಡನ್ನು ತುಂಬಿಕೊಳ್ಳುತ್ತಿತ್ತು. ಆಕೃತಿ ಅಷ್ಟು ದೂರದ ಅರಳಿಮರದವರೆಗೂ ಹೋಗಿ, ಅಗೋಚರವಾಯಿತು!

ನಿಂತು ನೋಡುತ್ತಿದ್ದವನಿಗೆ ಅಷ್ಟು ದೂರದಲ್ಲಿದ್ದ ಆ ಅರಳಿ ಮರದಡಿ, ಮಿನುಗೋ ಬೆಳಕೊಂದು ಕಾಣಿಸತೊಡಗಿತು. ಅದು ಹಲವಾರು ಬಿಳಲುಗಳನ್ನು ಹೊತ್ತ ಅರಳಿಮರ. ಆ ಕತ್ತಲೆ ರಾತ್ರಿ ಕಾಣುತ್ತಿದ್ದ ಬೆಳಕಿನತ್ತ ನಡೆದ. ಸಮೀಪಿಸಿದಂತೆ ಬೆಳಕು ಕಾಣದಾಯಿತು. ಬದಲಿಗೆ ಮಂದ ಬೆಳಕೊಂದು ಜಗತ್ತನ್ನು ಪ್ರಕಟಿಸುತ್ತಿತ್ತು. ಅಲ್ಲಿ ಆರಿದ ಬುಡ್ಡಿಗಳು ಬೆಳಕ ಸೋಕಿಸುವ ಬೆರಳುಗಳಿಗಾಗಿ ಕಾಯುತ್ತ ಕುಂತಿದ್ದವು. ಮರದ ಸುತ್ತಲೂ ನೋಡಿದ. ಯಾರ ಸುಳಿವೂ ಇಲ್ಲ. ಆ ಮರ ಅವನನ್ನು ಸೆಳೆಯುತ್ತಿತ್ತು. ಸುಮ್ಮನೆ ಕೂತವನು ಹಾಗೇ ಕಣ್ಣು ಮುಚ್ಚಿದ. ಬೆಳಕಿನ ಟಿಸಿಲುಗಳು ಮೈಯಲ್ಲೆಲ್ಲಾ ಹರಡಿದಂತಾಗಿ ಆಹ್ಲಾದಕರವಾದಂತಾಯಿತು. ಸುಡುವ ಕೆಂಡಕ್ಕೆ ನೀರು ಸುರಿಯುವುದು ಹೇಗೆ ಎಂಬ ಚಿಂತೆಯೊಳಗೆ ಧ್ಯಾನದ ದಾರಿ ತೆರೆದುಕೊಳ್ಳುತ್ತಲೇ ಹೋಯಿತು.

ಇದ್ದಕ್ಕಿದ್ದ ಹಾಗೆ ಇಬ್ಬನಿಯ ಬಿಂದುವೊಂದು ಬೆಳಕನ್ನು ಸೆಳೆದುಕೊಂಡು ಮಿನುಗುವ ಪರಿಗೆ, ಎದುರಿಗಿದ್ದ ಒಣಗಿದ ಮರದ ಎಲೆಗಳು ಹಸಿರಾಗತೊಡಗಿದವು. ಬೆಳದಿಂಗಳು ಮೂಡಿ ಇಡೀ ಕಾಡನ್ನೇ ತೋಯಿಸಿ ತೇಲುತ್ತಿದ್ದವು ಕನಸುಗಳು. ನವಿಲುಗಳು ನಾಟ್ಯ ಮಾಡುತ್ತಿದ್ದವು. ಜಿಂಕೆಯೊಂದು ತಾ ಹೆತ್ತ ಮಗುವಿಗೆ ಹಾಲುಣಿಸುತ್ತಿತ್ತು. ಇದರ ನಡುವೆ ಆ ವಿಸ್ಮಯಲೋಕದ ಧ್ಯಾನದ ದಾರಿಯಲ್ಲಿ ಬೆಳಕೊಂದು ತನ್ನತ್ತಲೇ ಬರುತ್ತಿರುವುದನ್ನು ಕಂಡನು. ಕಣ್ತೆರೆದ. ಹೌದು, ಬೆಳದಿಂಗಳು ಸುರಿಯುತ್ತಿತ್ತು. ಆಕಾಶದತ್ತ ನೋಡಿದ ಅಬ್ಬಾ! ಎಷ್ಟು ಚಂದದ ಬೆಳದಿಂಗಳು ಎನ್ನುತ್ತಾ ಇದುವರೆಗೂ ಅವನು ನೋಡದ ಬೆಳದಿಂಗಳನ್ನು ಕಣ್ಣಲ್ಲೇ ತುಂಬಿಕೊಂಡ. ಬೆಳಕು ಹರಿದು ಸೂರ್ಯನ ಕಿರಣಗಳು ಕಾಡನ್ನು ಚುಂಬಿಸುತ್ತಿದ್ದವು. ಸುಮ್ಮನೆ ಹೊರಟ... ಹೋಗುತ್ತಲೇ ಇದ್ದ.

ಕಾಲುಗಳಲ್ಲಿ ಶಕ್ತಿ ಕುಂದಿ ನಿಂತವನಿಗೆ ಹಗುರಾಗಬೇಕೆನಿಸಿ ಅಲ್ಲೊಬ್ಬ ನಿಂತಿದ್ದವನನ್ನು ಕರೆದ. ಬಂಧವನ ಕೈಹಿಡಿದ. ಇವನ ಸ್ಪರ್ಶಕ್ಕೆ ಅವನ ಕಣ್ಣುಗಳಲ್ಲಿ ಬೆಳಕು ತುಂಬಿತು. ತನಗೆ ಆದದ್ದನ್ನು ಮಾತುಗಳಲ್ಲಿ ಉಲುಬಿದ. ‘ನಿನ್ನಿಂದ ಅರಿವು ಹರಡಲಿ’ ಎಂದವನು ಕಾಡಿನತ್ತ ನೋಡಿದ.

‘ಬುದ್ಧ ನಗುತ್ತಿದ್ದ. ಬೆಳಕು ಕತ್ತಲನು ಸೀಳುತಿತ್ತು. ಜಂಗಮ ನಡೆಯುತ್ತಿದ್ದ.

ಬಯಲೇ ಬಯಲಾಗಿ...

ಪ್ರತಿಕ್ರಿಯಿಸಿ: feedback@sudha.co.in